ಸಾಹಿತ್ಯದಲ್ಲಿ ಇರುವ ಲೋಕದರ್ಶನವನ್ನು ನಾನು ಗೌರವಿಸುತ್ತೇನೆ.

◆ **ಇಂಗ್ಲಿಷ್ ವಿಮರ್ಶಾ ಮಾದರಿಗಳನ್ನನುಸರಿಸಿದ ಕನ್ನಡದ ಅನೇಕ ವಿಮರ್ಶಕರು ಕನ್ನಡ ಸಾಹಿತ್ಯವನ್ನು ಸರಿಯಾದ ದೃಷ್ಟಿಕೋನಗಳಿಂದ ಓದಲಿಲ್ಲ ಅನ್ನೋ ಅಭಿಪ್ರಾಯ ಹಲವರಲ್ಲಿದೆ. ನೀವು ಇದನ್ನು ಹೇಳದಿದ್ದರೂ ಬಿಎಂಶ್ರೀ ಅವರಿಂದ ಹಿಡಿದು ಇಂಗ್ಲಿಷ್ ಹಿನ್ನೆಲೆಯ ನಿಮ್ಮ ಸಮಕಾಲೀನ ಅನೇಕ ವಿಮರ್ಶಕರ ಬಗೆಗೆ ನಿಮಗೂ ಒಂಥರದ ಅಸಮಾಧಾನವಿದೆ. ಅವರ ಓದಿನಲ್ಲಿ ಅನೇಕ ಬಿರುಕುಗಳಿವೆ ಎಂಬರ್ಥದಲ್ಲಿ. ಈಗ ಹಿಂತಿರುಗಿ ನೋಡಿದರೆ ಏನನ್ನಿಸುತ್ತದೆ?**

ಇದು ಎರಡು ಬಗೆಯಲ್ಲಿದೆ. ಒಂದು, ಇಂಗ್ಲೆಂಡ್ ಅಥವಾ ಯುರೋಪಿನ ಮಾದರಿಗಳೇ ಅಂತಿಮ ಎಂದು ನಂಬಿ ಅನುಸರಿಸಿದ ಕ್ರಮ. ಇನ್ನೊಂದು, ಇಂಗ್ಲಿಷ್ ಮಾದರಿಗಳನ್ನು ಓದುತ್ತಲೇ ಅವುಗಳೊಂದಿಗೆ ಅಂತರ ಇಟ್ಟುಕೊಂಡು, ಅವುಗಳನ್ನು ವಿಮರ್ಶಿಸುತ್ತಾ, ಒರೆಗೆ ಹಚ್ಚುತ್ತಾ, ಬದಲಾವಣೆ ಮಾಡಿಕೊಳ್ಳುತ್ತಾ ಬಳಸಿಕೊಳ್ಳುವ ಕ್ರಮ. ಆಫ್ರಿಕನ್, ಲ್ಯಾಟಿನ್ ಅಮೆರಿಕನ್, ರಷಿಯನ್ ಚಿಂತನಾ ಕ್ರಮಗಳು ಪ್ರಭಾವ ಬೀರಿದಾಗ ಆಗುವ ವ್ಯತ್ಯಾಸಗಳು ಬೇರೆ ಬಗೆಯವು. ಕೊರಿಯನ್ ಲೇಖಕಿ ಹ್ಯಾನ್‌ಕಾಂಗ್ ಬರೆದದ್ದು, ನೈಜೀರಿಯಾದ ಲೇಖಕಿ ಚಿಮಮಾಂಡಾ ಅಡಿಚಿ ಕಾದಂಬರಿಗಳಲ್ಲಿ ಹೇಳಿರುವ ಸತ್ಯಗಳು, ಅರ್ಜೆಂಟಿನಾದ ಲೇಖಕ ಬೊರ್ಹೆಸ್ ಹೇಳಿರುವ ಸತ್ಯಗಳಿರಬಹುದು, ಅವೆಲ್ಲವೂ ಕೂಡ ಹೊರಗಿನಿಂದಲೇ ಬಂದಿವೆ. ಇಂಗ್ಲಿಷ್ ಒಂದು ದಾರಿ ನಿರ್ಮಿಸಿತು. ಆದರೆ, ಪಂಪನಿಂದ ಹಿಡಿದು, ಜಾನಪದವನ್ನು ಒಳಗೊಂಡು ಇಂದಿನ ಅನೇಕ ಬರಹಗಾರರನ್ನು ಓದಲು ಬೇಕಾದ ದಾರಿಗಳು ಇಂಗ್ಲಿಷ್‌ನಲ್ಲಿ ಇವೆಯೆ? ಕೆಲಸ ಮಾಡುವವರ ಮಿತಿ ಬೇರೆ, ಅವರು ಬಳಸುವ ಆಕರಗಳ ಮಿತಿ ಬೇರೆ. ಬಿಎಂಶ್ರೀ ಅವರ ನಿಲುವುಗಳಿಗೂ ಬೇಂದ್ರೆಯವರ ನಿಲುವುಗಳಿಗೂ ಯಾಕೆ ವ್ಯತ್ಯಾಸ ಬಂತು? ಹಾಗಂದ ತಕ್ಷಣ ಬೇಂದ್ರೆ ಅವರು ಇಂಗ್ಲಿಷ್ ಓದಿರಲಿಲ್ಲ ಅಂತಲ್ಲ. ಇಂಗ್ಲಿಷ್ ನಮ್ಮ ಪರಂಪರೆಯ ಹುಸಿಗಳನ್ನು ಅನಾವರಣ ಮಾಡುವ 'ವಿದ್ರೋಹ'ದ ಒಂದು ತಿಳಿವಳಿಕೆಯನ್ನೂ ನಮ್ಮಲ್ಲಿ ಮೂಡಿಸಿದೆ. ಇದೆಲ್ಲವನ್ನೂ ನಾವು ಮರೆಯುವಂತಿಲ್ಲ. 'ನಾನು' ಅನ್ಯವನ್ನು ಸಾರಾಸಗಟಾಗಿ ನಿರಾಕರಿಸುವವರ ಗುಂಪಿಗೆ ಸೇರಿದವನಲ್ಲ. ಒಂದು ಸಮಸ್ಯೆಯೆಂದರೆ, ನವ್ಯದ ಬಹುತೇಕ ಇಂಗ್ಲಿಷ್ ಹಿನ್ನೆಲೆಯ ವಿಮರ್ಶಕರಿಗೆ ಕನ್ನಡ ಪರಂಪರೆಯ ಆಳವಾದ ಅರಿವಿರಲಿಲ್ಲ. ಜೊತೆಗೆ ಇದನ್ನು ನಿರಾಕರಿಸುವ ಒಂದು ಧೋರಣೆಯಿತ್ತು. ಪಂಪನನ್ನು ಓದಬೇಕಾಗಿಲ್ಲ, ಆತನ ಬಗ್ಗೆ ಬರೆಯಬೇಕಾಗಿಲ್ಲ ಅನ್ನೋ ಧೋರಣೆ. ಹಾಗೆಯೇ ಅವರು ಧಾರ್ಮಿಕತೆಯನ್ನು ಒಂದು ಸಂಕುಚಿತವಾದ ಪರಿಧಿಯಲ್ಲಿ ನೋಡಿದ್ದು. ಆದಿಪುರಾಣ ಇರಲಿ, ಕುಮಾರವ್ಯಾಸ ಭಾರತ ಇರಲಿ, ವಚನ ಇರಲಿ, ಅದರ ಧಾರ್ಮಿಕ ಚೌಕಟ್ಟು ಅವರಿಗೆ ಇರಿಸುಮುರುಸು ಉಂಟುಮಾಡಿತ್ತು. ತುಂಬಾ ಸರಳೀಕೃತವಾದ ತಿಳಿವಳಿಕೆಯಿದು. ಈ ವಿಮರ್ಶಕರು, ಮೊದಲ ಹಂತದಲ್ಲಿ, ಅಡಿಗರನ್ನು ಮತ್ತು ಅವರ ಸಮಕಾಲೀನರನ್ನು ಬಿಟ್ಟರೆ ಒಟ್ಟು ಕನ್ನಡ ಕಾವ್ಯ ಪರಂಪರೆಯ ಬಗ್ಗೆ ಬರೆಯುವುದನ್ನು ಮಹತ್ವದ್ದೆಂದು ಭಾವಿಸಲಿಲ್ಲ. ಅಂತಿಮ ದಿನಗಳಲ್ಲಿ ಪಶ್ಚಾತ್ತಾಪದಂತೆ ಅಷ್ಟಿಷ್ಟು ಬರೆದಿರಬಹುದು, ಅದು ಬೇರೆ ಮಾತು. ಅವರ ಈ ಬಗೆಯ ನಿರ್ಲಕ್ಷ್ಯ, ಅವಜ್ಞೆ ನನ್ನನ್ನು ಕಾಡಿತ್ತು. ಇದು ಒಟ್ಟಾರೆಯಾಗಿ ಅವರ ವಿಮರ್ಶಾಧೋರಣೆಗಳ ಮಿತಿ. ಆಗ ಬಳಕೆಯಲ್ಲಿದ್ದ ವಿಮರ್ಶಾ ವಿಧಾನಗಳ ಬಗ್ಗೆ, ಅಥವಾ ತಮ್ಮ ಅರೆಬರೆ ತಿಳಿವಳಿಕೆಯನ್ನು ಕನ್ನಡದ ಮೇಲೆ ಹೇರುತ್ತಿದ್ದ ಆಕ್ರಮಣಶೀಲ ರೀತಿಯ ಬಗ್ಗೆ ನಮಗೆ ಅಸಮಾಧಾನವಿತ್ತೇ ಹೊರತು ಇದರಲ್ಲಿ ವೈಯಕ್ತಿಕವಾದದ್ದು ಏನೂ ಇಲ್ಲ. ನನ್ನಂತೆ ಹಲವರಲ್ಲಿ ಈ ಅಸಮಾಧಾನ ಇತ್ತು. ಕೆ.ವಿ. ನಾರಾಯಣರ 'ಕನ್ನಡಿಗಳು ಇನ್ನು ಸಾಕು' ಎಂಬ ಲೇಖನ ನೀವು ಗಮನಿಸಿರ್ತೀರಿ. ಇಂಗ್ಲಿಷ್‌ನಿಂದ ಕಡ ತಂದ ವಿಮರ್ಶಾವಿಧಾನಗಳು ಕೆಲವು ಕಣ್ಕಟ್ಟುಗಳನ್ನು ನಿರ್ಮಿಸಿದವು. ಇಲ್ಲಿಯೇ ಇನ್ನೊಂದು ಮಾತು ಹೇಳಬೇಕು. ಈ ಕಣ್ಕಟ್ಟುಗಳು ನಮ್ಮೊಳಗಿನ ಮಾದರಿಗಳಿಂದಲೂ ಬರಬಹುದು. ಸ್ತ್ರೀವಾದವೂ ಕೆಲವೊಮ್ಮೆ ಕಣ್ಕಟ್ಟಿನ ತರಹ ಬಳಕೆಯಾಗುವ ಅಪಾಯವಿರುತ್ತದೆ. ಗಾಂಧೀವಾದವೂ ಕಣ್ಕಟ್ಟಾಗಬಹುದು, ಮಾರ್ಕ್ಸ್‌ವಾದ ಕೂಡ. ಅಡಿಗರನ್ನು ಒಪ್ಪಿದವರು ನಾವು ಬೇರೆ ಕವಿಗಳನ್ನು ಒಪ್ಪುವುದಿಲ್ಲ ಎನ್ನುವುದು ಕೂಡ ಒಂದು ಕಣ್ಕಟ್ಟೇ ತಾನೇ. ಕುಮಾರವ್ಯಾಸ, ಬೇಂದ್ರೆ ಅವರನ್ನು